**ದಿನಾಂಕ:– 7-11-2005 ನೇ ಸೋಮವಾರ ಮಧ್ಯಾಹ್ನ 3-00 ಘಂಟೆಗೆ ಮಾನ್ಯ ನಗರಸಭೆ ಅಧ್ಯಕ್ಷರಾದ ಶ್ರೀ ಹೆಚ್.ಡಿ ತಮ್ಮಯ್ಯರವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಗಳು.**

| | |
|---|---|
| ಹಾಜರಿ | 21 |
| ಗೈರು ಹಾಜರಿ | 12 |
| ಒಟ್ಟು | 33 |

ಮೃತರ ಆತ್ಮಕ್ಕೆ ಶಾಂತಿ ಕೋರುವ ವಿಚಾರ:–

1) ಸಭೆಯು ಪ್ರಾರಂಭವಾಗುವ ಮುನ್ನ ನಗರಸಭೆಯ ಹಿರಿಯ ಸಧಸ್ಯರಾದ ಶ್ರೀ ನಿಕೋಲಾಸ್ ಡಿ' ಸೋಜ ರವರು ಪ್ರಸ್ತಾಪಿಸಿ ಜಗದ್ಗುರುಗಳಾದ ಶ್ರೀ ಪೋಪ್ ಜಾನ್ ಪಾಲ್ ರವರು ನಿಧನ ಹೊಂದಿದ್ದು. ಇವರು ಜಗತ್ತಿಗೆ, ಸಮಾಜ ಸೇವೆ. ಧರ್ಮದ ಆಚಾರ ವಿಚಾರಗಳ ಬಗ್ಗೆ ಹಾಗೂ ಧೀನದಲಿತರ ಬಗ್ಗೆ ಕಾಳಜಿಯನ್ನು ಇಟ್ಟುಕೊಂಡಿದ್ದು. ಇವರ ಆಕಾಲ ಮರಣವು ಜಗತ್ತಿಗೆ ತುಂಬಲಾರದಷ್ಟು ನಷ್ಠ ಉಂಟಾಗಿದ್ದು. ಇವರ ಆಕಾಲ ಮರಣಕ್ಕೆ ಭಗವಂತನು ಶಾಂತಿಯನ್ನುಂಟು ಮಾಡಲಿ ಎಂದು ಸೂಚಿಸಿದ್ದನ್ನು ಇಡೀ ಸಭೆಯು ಒಮ್ಮತದಿಂದ ಅಂಗೀಕರಿಸಲಾಯಿತು.

2) ನಗರದ ಹೊಸ ಮನೆ ಬಡಾಬಣೆಯಲ್ಲಿ ಹಿರಿಯರಾದ ಹಾಗೂ ನಗರದ ಜನತೆಗೆ ಚಿರಪರಿಚಿತರಾಗಿರುವ ಉಧ್ಯಮಿ ಶ್ರೀ ರಾಬರ್ಟ್ ರೆಕ್ಸ್ ರವರು ನಿಧನ ಹೊಂದಿರುವುದಕ್ಕೆ ಹಿರಿಯ ಸಧಸ್ಯರಾದ ಶ್ರೀ ನಿಕೋಲಾಸ್ ಡಿ' ಸೋಜ ರವರು ಮೃತರ ಬಗ್ಗೆ ಗುಣಗಾನ ಮಾಡಿ ಸೂಚಿಸಿದ್ದನ್ನು ಸಧಸ್ಯರಾದ ಶ್ರೀ ಜೆರ್ಮಿಲೋಬೋ ರವರು ಅನುಮೋದಿಸಿ ಮೃತರ ಕುಟುಂಬಕ್ಕೆ ಭಗವಂತನು ದುಖಃ ಬರಿಸುವ ಶಕ್ತಿ ನೀಡಲೆಂದು ಸಭೆಯು ಮೌನಾಚರಣೆ ಮಾಡಲಾಯಿತು.

3) ನಗರಸಭೆಗೆ ಉತ್ತಮ ಸೇವೆ ಸಲ್ಲಿಸಿದ ಆಭಿಯಂತರರಾದ ಶ್ರೀ ಪೆಡ್ರಿಕ್ ಭಾಸ್ಕೋ ರವರು ಆಕಾಲ ಮರಣ ಹೊಂದಿದ್ದನ್ನು ಹಿರಿಯ ಸಧಸ್ಯರಾದ ಶ್ರೀ ನಿಕೋಲಾಸ್ ಡಿ' ಸೋಜ ರವರು ಸಭೆಗೆ ತಿಳಿಸುತ್ತಲೇ ಇಡೀ ಸಭೆಯು ದಿಗ್ಭ್ರಮೆ ವ್ಯಕ್ತ ಪಡಿಸಿ ಮೃತರು ಸ್ವಬಾವತಃ ಮೃದು ಸ್ವಭಾವ ದವರರಾಗಿದ್ದು ಒಳ್ಳೇ ಕರ್ತವ್ಯ ನಿರ್ವಹಿಸಿ ನಗರದ ಆಭಿವೃದ್ಧಿ ಕೆಲಸಗಳಿಗೆ ಸ್ಪಂದಿಸಿರುತ್ತಾರೆಂದು ಇವರ ಆಕಾಲ ಮರಣ ಇವರ ಕುಂಟುಂಬಕ್ಕೆ, ಬಂಧು ಮಿತ್ರರಿಗೂ ತುಂಬಲಾರದಷ್ಟು ನಷ್ಠ ಉಂಟಾಗಿದ್ದು. ಭಗವಂತನು ಇವರ ಕುಟುಂಬಕ್ಕೆ ಹಾಗೂ ಇವರ ಹಿತೈಷಿಗಳಿಗೂ ದುಖಃ ಭರಿಸುವ ಶಕ್ತಿ ನೀಡಲೆಂದು ಇಡೀ ಸಭೆಯು ಮೃತರ ಗೌರವಾರ್ಥ ಮೌನಾಚರಣೆ ಮಾಡಲಾಯಿತು.

-:ಸಭೆಯಲ್ಲಿ ಚರ್ಚೆಗೆ ಬರಲಿರುವ ವಿಷಯಗಳು:–

ವಿಷಯ:–1:–ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ರೆಕಾರ್ಡ್ ಮಾಡುವ ವಿಚಾರ.

ವಿಷಯ :–2:- ದಿನಾಂಕ 4-5-2005 ರ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ರೆಕಾರ್ಡ್ ಮಾಡುವ ವಿಚಾರ.

ತೀರ್ಮಾನ:

ಈ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು ದಿನಾಂಕ:– 4-5-2005ರ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ರೆಕಾರ್ಡ್ ಮಾಡುವ ಸಮಯದಲ್ಲಿ ಹಿರಿಯ ಸದಸ್ಯರಾದ ಶ್ರೀ ನಿಕೋಲಾಸ್ ಡಿ' ಸೋಜರವರು ಸದರಿ ಸಭೆಯ ತೀರ್ಮಾನವನ್ನು ಒಪ್ಪುವುದಿಲ್ಲವೆಂದು ಸಭೆಯಲ್ಲಿ ತಿಳಿಸಲಾಗಿ ಉಳಿದ

PDF Created with deskPDF PDF Writer - Trial :: http://www.docudesk.com

ಸರ್ವಸದಸ್ಯರು ದಿ:–4.5.2005 ರ ಸಾಮಾನ್ಯ ಸಭೆಯ ತೀರ್ಮಾನವನ್ನು ಸರ್ವಾನುಮತದಿಂದ ಒಪ್ಪಿಗೆಯನ್ನು ನೀಡಿರುತ್ತಾರೆ.

ವಿಷಯ :– 3 :- ದಿನಾಂಕ 5-08-2005 ರ ವಿಶೇಷ ಸಭೆಯ ನಡವಳಿಕೆಗಳನ್ನು ಓದಿ ರೆಕಾರ್ಡ್ ಮಾಡುವ ವಿಚಾರ.

ತೀರ್ಮಾನ:–

ಸಭೆಯಲ್ಲಿ ವಿಷಯವನ್ನು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವ ಸಮಯದಲ್ಲಿ ಸದಸ್ಯರಾದ ಶ್ರೀ ನಿಕೋಲಾಸ್ ಡಿ' ಸೋಜರವರು ಸದರಿ ಸಭೆಯ ನಡವಳಿಕೆಗಳನ್ನು ಒಪ್ಪದಿದ್ದಾಗ. ಉಳಿದ ಸರ್ವಸದಸ್ಯರು ದಿ:–5-08-2005 ರ ತೀರ್ಮಾನಕ್ಕೆ ಸರ್ವಾನುಮತದಿಂದ ಒಪ್ಪಿಗೆ ನೀಡಿರುತ್ತಾರೆ.

ವಿಷಯ:– 4:- ಏಪ್ರಿಲ್ 2005 ರಿಂದ ಆಗಸ್ಟ್ 2005 ರವರೆಗಿದ ಜಮಾ ಖರ್ಚನ್ನು ಓದಿ ದಾಖಲಿಸುವ ವಿಚಾರ.

ತೀರ್ಮಾನ:–4:–

ಈ ಬಗ್ಗೆ ಚರ್ಚಿಸಲಾಯಿತು. ಸದಸ್ಯರಾದ ಶ್ರೀ ನಿಕೋಲಾಸ್ ಡಿ' ಸೋಜರವರು ಏಪ್ರಿಲ್ 2005 ಮತ್ತು ಮೇ 2005 ರ ಖರ್ಚು–ವೆಚ್ಚಗಳನ್ನು ಮಾತ್ರ ಒಪ್ಪುವುದಾಗಿ ಉಳಿದ 3 ತಿಂಗಳ ಜಮಾ ಖರ್ಚನ್ನು ಮುಂದಿನ ಸಭೆಗೆ ತರಬೇಕೆಂದು ತಮ್ಮ ಅಭಿಪ್ರಾಯ ಸೂಚಿಸಿದ್ದು ಉಳಿದಂತೆ ಎಲ್ಲಾ ಸದಸ್ಯರು ಏಪ್ರಿಲ್ 2005 ರಿಂದ ಆಗಸ್ಟ್ 2005 ರವರೆಗಿನ ಜಮಾ–ಖರ್ಚನ್ನು ಬಹುಮತದಿಂದ ಒಪ್ಪಿಗೆ ನಿಡಲಾಯಿತು.

ವಿಷಯ:–5:- ಮಾರ್ಚ 2005 ರಿಂದ ಜುಲೈ 2005 ರವರೆಗಿನ ಜನನ ಮರಣ ವರದಿ ಒಪ್ಪುವ ವಿಚಾರ.

ತೀರ್ಮಾನ:–5:–

ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

ವಿಷಯ:– 6:- 2005-06 ನೇ ಸಾರಿಗೆ ಸ್ವಯಂ ಘೋಷಿತ ಆಸ್ತಿ ತೆರಿಗೆ ದರ ನಿಗದಿ ಪಡಿಸಿ ವಸೂಲಿ ಮಾಡುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಮಾನ್ಯ ನಿರ್ದೇಶಕರ ಸುತ್ತೋಲೆ ಪತ್ರದ ಸಂಖ್ಯೆ ಪೌಸ:ಎಸ್ಎಎಸ್:56:05-06 ದಿ:–2-09-05 ರಂತೆ ಜಾರಿಗೊಳಿಸಲು ಒಪ್ಪಿಗೆ ನೀಡುವ ವಿಚಾರ.

ತೀರ್ಮಾನ:–6:–

ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ಹೊರಡಿಸಿದ ಸುತ್ತೋಲೆ ಸಂಖ್ಯೆ ಪೌನಿ:ಎಸ್ಎಎಸ್ :56:05-06 ದಿ:2-09-05 ರಲ್ಲಿ ವಿವರಗಳನ್ನು ಸಭೆಯಲ್ಲಿ ಕೂಲಂಕುಷ ವಾಗಿ ಒಪ್ಪಲಾಯಿತು. ಕಛೇರಿವತಿಯಿಂದ ಸುತ್ತೋಲೆಯಲ್ಲಿ ತಿಳಿಸಿದಂತೆ ಸ್ವಂತ ವಾಸದ ಮನೆಗೆ ಶೇ.0.30 ಶೇ0-60 ಶೇ0.90 ಮತ್ತು 1.00 ರ ದರದಂತೆ ಮತ್ತು ವಾಣಿಜ್ಯ ಕಟ್ಟಡಗಳಿಗೆ ಶೇ.0.50 ಶೇ90 ಶೇ1.00 ಶೇ1.50 ಮತ್ತು ಶೇ2.00 ರಂತೆ ದರ ನಿಗದಿಮಾಡಲು ಕೋರಿರುವುದನ್ನು ಉದಾಹರಣೆ ಸಹಿತ ಸಭೆಗೆ ವಿವರಿಸಿರುವುದನ್ನು ಪರಿಶೀಲಿಸಿ ನಗರ ವ್ಯಾಪ್ತಿಯಲ್ಲಿನ ಆಲ್ಪ ಆದಾಯದವರ ಹಿತದೃಷ್ಟಿಯಿಂದ ಆಸ್ತಿ ತೆರಿಗೆ ದರವನ್ನು ಒಂದೇ ಬಾರಿ ಹೆಚ್ಚು ಮಾಡಲು ಸಾಧ್ಯವಿಲ್ಲವಾಗಿ. ಈ ಕೆಳಕಂಡ ದರದಂತೆ ಆಸ್ತಿ ತೆರಿಗೆಯನ್ನು 2005-06 ನೇ ಸಾಲಿನಿಂದ ಜಾರಿಗೆ ಬರುವಂತೆ ವಸೂಲಿ ಮಾಡಲು ಸರ್ವನುಮತದಿಂದ ತೀರ್ಮಾನಿಸಲಾಯಿತು.ಸ್ವಂತವಾಸದ ಮನೆಗಳಿಗೆ ಶೇ.0.7 ರ ವಾಣಿಜ್ಯ ವ್ಯಾಪಾರ ಕಟ್ಟಡಗಳು ಶೇ.1.5

PDF Created with deskPDF PDF Writer - Trial :: http://www.docudesk.com

ವಿಷಯ:–7:- ಸೊಳ್ಳೆನಾಶಕ ಯಂತ್ರಗಳ ಖರೀದಿಗೆ ಟೆಂಡರ್ ಕರೆದಿದ್ದು. ಬಂದಿರುವ ಟೆಂಡರ್ಗಳ ಪೈಕಿ ಸ್ವಾತಿ ಇನ್ ಬೆಂಗಳೂರು ಇವರ ದರ ಕಡಿಮೆ ಇದ್ದು ಒಂದು ಯಂತ್ರಕ್ಕೆ 26.500=00 ನಮೊದಿಸಿದ್ದು. ಒಪ್ಪಿ ಖರೀದಿಸಲು ಮಂಜೂರಾತಿ ನೀಡುವ ವಿಚಾರ.

ತೀರ್ಮಾನ:7:–

ಈ ವಿಷಯ ಕುರಿತು ಚರ್ಚಿಸಲಾಯ್ತು 4 ಸೊಳ್ಳೆ ನಾಶಕ ಯಂತ್ರಗಳನ್ನು ಪ್ರಯೋಗಿಕವಾಗಿ ಖರೀದಿಸ ಬೇಕೆಂದು. ನಂತರ ಅವಶ್ಯಕತೆ ಇದ್ದರೆ ಖರೀದಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯ್ತು.

ವಿಷಯ:–8:- ಗಣಕೀಕರಣ ಕಾರ್ಯನಿರ್ವಹಿಸಲು ಪ್ರತ್ಯೇಕ ಸಂಸ್ಥೆಯಿಂದ ಟೆಂಡರ್ ಕರೆಯಲು ಮಂಜೂರಾತಿ ನೀಡುವ ವಿಚಾರ.

ತೀರ್ಮಾನ:–8:-

ಈ ಬಗ್ಗೆ ಚರ್ಚಿಸಿ ಕಛೇರಿ ಗಣಕ ಕಾರ್ಯ ನಿರ್ವಹಿಸಲು ಪ್ರತ್ಯೇಕ ಖಾಸಗಿ ಸಂಸ್ಥೆಗೆ ಟೆಂಡರ್ ವಹಿಸಲು ಸರ್ವಾನುಮತದಿಂದ ತೀರ್ಮನಿಸಲಾಯ್ತು.

ವಿಷಯ:–9:– ವಾ.ನಂ.1 ರಿಂದ 31 ರವರೆಗಿನ ನಗರ ಸಭಾ ವ್ಯಾಪ್ತಿಯ ರಸ್ತೆಗಳ ಗುಂಡಿಗಳನ್ನು ಮುಚ್ಚುವುದಕ್ಕೆ ರೂ 5.70 ಲಕ್ಷಗಳಿಗೆ ಮಂಜೂರಾತಿ ನೀಡುವ ಬಗ್ಗೆ.

ತೀರ್ಮಾನ:–9:–

ಈ ಬಗ್ಗೆ ವಿವರವಾಗಿ ಚರ್ಚಿಸಲಾಯ್ತು. ನಗರ ಸಭೆಯ ರಸ್ತೆಗಳು ಹಾಳಾಗಿದ್ದು. ವಾಹನ ಸಂಚಾರಕ್ಕೆ ಆನುಕೂಲವಾಗುವಂತೆ ರಸ್ತೆಗಳ ಗುಂಡಿ ಮುಚ್ಚುಲು ಸಿದ್ಧಪಡಿಸಿದ ಆಂದಾಜು ಕಾಮಗಾರಿ ಮೊತ್ತ ರೂ 5.70 ಕ್ಕೆ ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

ವಿಷಯ:– 10 :– ನಗರಸಭಾ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿಗೆ ಟೆಂಡರ್ ಕಾಮಗಾರಿಗಳನ್ನು ಕರೆದಿದ್ದು ಹಾಗೂ ಕರಿಯುವಂತಹುಗಳಿಗೆ ಶೇ 18 ರೂಳಗೆ ದರ ನಮೂದಿಸಿರುವ ಗುತ್ತಿಗೆ ದಾರರ ದರ ಪತ್ರ ಆಂಗಿಕರಿಸಿ ಕಾರ್ಯಾದೇಶ ನೀಡುವ ಬಗ್ಗೆ ಮಂಜೂರಾತಿ ನೀಡುವ ವಿಚಾರ.

ತೀರ್ಮಾನ:

ಸರ್ವಾನುಮತದಿಂದ ಒಪ್ಪಿಗೆ ನೀಡಲಯಿತು.

ವಿಷಯ:– 11:– ಜಿಲ್ಲಾ ಕೈಗಾರಿಕಾ ಸರಬರಾಜು ಮಾರಾಟ ಸಹಕಾರ ಸಂಘ (ನಿ) ಚಿಕ್ಕಮಗಳೂರು ಅವರಿಂದ ನಗರ ಸರ್ವೆ ಕಾರ್ಯನಿರ್ವಹಿಸುವ ಕಡತಗಳನ್ನು ಪ್ರತ್ಯೇಕವಾಗಿ ಇಡಲು $6^1/_2$ ಮತ್ತು$5^1/_2$ ಅಡಿ ಅಲ್ಮೇರಾ ಖರೀದಿಸಿದ್ದು 45.982-00 ಕ್ಕೆ ಮಂಜೂರಾತಿ ನೀಡುವ ವಿಚಾರ.

ತೀರ್ಮಾನ:

ಸರ್ವಾನುಮತದಿಂದ ಒಪ್ಪಿಗೆ ನಿಡಲಾಯಿತು.

ವಿಷಯ:– 12 :– ಹಿರೇಕೊಳಲೆ ಪೈಪ್‌ಲೈನ್ ದುರಸ್ತಿ ಕಾರ್ಯಕ್ಕೆ ಸೀಸ.ಹೆಂಪು ಮತ್ತು6 ಸಿ.ಐ ವಾಲ್ಸ್ ಖರೀದಿಸಿದ್ದು ರೂ.22,210 ಕ್ಕೆ ಮಂಜೂರಾತಿ ನೀಡುವ ವಿಚಾರ.

ತೀರ್ಮಾನ:–12:–

ಸರ್ವಾನುಮತದಿಂದ ಒಪ್ಪಿಗೆ ನೀಡಲುಯಿತು.

PDF Created with deskPDF PDF Writer - Trial :: http://www.docudesk.com

ವಿಷಯ:–13 :– ನಗದು ಶಾಖೆಗೆ ಒಂದು ಕ್ಯಾಶ್ ಚೆಕ್ಕನು  ಅಧಿಕೃತ ಮಾರಾಟಗಾರರಿಂದ ರೂ. 48.780.00 ಗಳಿಗೆ ಖರೀದಿಸಿರುವುದನ್ನು ಸ್ಥಿರೀಕರಿಸುವ ವಿಚಾರ.

ತೀರ್ಮಾನ:–13:–

ಸರ್ವಾನುಮತದಿಂದ ಒಪ್ಪಿಗೆ ನೀಡಲಯಿತು.

ವಿಷಯ:–14 :– ಶ್ರೀಮತಿ ರತ್ನಮ್ಮ ಕೋಂ ಕೇಶವಯ್ಯ. ಶಂಕರಪುರ 1ನೇ ತಿರುವು ಅವರು ಮನವಿ ಸಲ್ಲಿಸಿ ದಿನಾಂಕ:14-10-2005 ರಂದು ಸುರಿದಿರುವ ಭಾರೀ ಮಳೆಯಿಂದ ಅವರ ವಾಸದ ಮನೆ ಸಂಪೂರ್ಣ ಬಿದ್ದು ಹೋಗಿರುವುದರಿಂದ ಪರಿಹಾರ ನೀಡುವಂತೆ ಕೋರಿರುವ ವಿಚಾರ.

ತೀರ್ಮಾನ:–14:–

ಒಪ್ಪಲಾಯಿತು ಈ ಕುರಿತು ತೀರ್ಮಾನ ತೆಗೆದುಕೊಳ್ಳಲು ಆಧ್ಯಕ್ಷರವರಿಗೆ ಆಧಿಕಾರ ನೀಡಲಾಯಿತು.

ವಿಷಯ:–15 :– ಶ್ರೀರಂಗಯ್ಯ ಬಿನ್ ದೊಡ್ಡಯ್ಯ 1ನೇ ತಿರುವು ಶಂಕರಪುರ ಬಡವಣೆ ಚಿಕ್ಕಮಗಳೂರು. ಇವರು ಮನವಿ ಸಲ್ಲಿಸಿ ದಿನಾಂಕ 14-10-2005 ರಂದು ಸುರಿದಿರುವ ಭಾರೀ ಮಳೆಯಿಂದ ಅವರ ಮನೆ ಸಂಪೂರ್ಣ ಬಿದ್ದು ಹೋಗಿರುವುದರಿಂದ ಪರಿಹಾರ ನೀಡುವಂತೆ ಕೋರಿರುವ ವಿಚಾರ.

ತೀರ್ಮಾನ:–15:–

ಒಪ್ಪಲಾಯಿತು ಈ ಕುರಿತು ತೀರ್ಮಾನ ತೆಗೆದುಕೊಳ್ಳಲು ಆಧ್ಯಕ್ಷರವರಿಗೆ ಆಧಿಕಾರ ನೀಡಲಾಯಿತು.

ವಿಷಯ:–16 :– ನಗರಸಭಾ ವ್ಯಾಪ್ತಿಯ ಗೌರಿಕಾಲುವೆ ಜಾಗು ಪ್ರದೇಶದಲ್ಲಿ ಆನಧಿಕೃತವಾಗಿ ನಿರ್ಮಿಸಿದ ಮನೆಯನ್ನು ಸಕ್ರಮಗೊಳಿಸಲು ಮಾನ್ಯ ಜಿಲ್ಲಾಧಿಕಾರಿಗಳವರಿಂದ ಬಂದ ಪತ್ರದಂತೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವ ವಿಚಾರ.

ತೀರ್ಮಾಣ:–16:–

ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

ವಿಷಯ:–17:– ಉಪಾಧ್ಯಕ್ಷರ ಕೊಠಡಿಗೆ ಹಾಲಿ ಇರುವ ಕುರ್ಚಿಗಳು ತುಂಬಾ ಹಾಳಾಗಿದ್ದು ಇವುಗಳನ್ನು ಬದಲಿಸಿ ಜಿಲ್ಲಾ ಕೈಗಾರಿಕಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘ ಚಿಕ್ಕಮಗಳೂರು ಇವರಿಂದ (10)ಕುರ್ಚಿಗಳನ್ನು ಖರೀದಿಸಲು 31.781 ಕ್ಕೆ ಮಂಜೂರಾತಿ ನೀಡುವ ವಿಚಾರ.

ತೀರ್ಮಾನ:–17:–

ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

ವಿಷಯ:–18:– ಚಿಕ್ಕಮಗಳೂರು ನಗರದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಕವರ್, ಬ್ಯಾಗ್,ಲೋಟ ಇತ್ಯಾಧಿಗಳನ್ನು ನಿಷೇಧಿಸುವ ವಿಚಾರ.

ತೀರ್ಮಾನ:– ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

ವಿಷಯ:–:–19.ನಗರದಸಭಾ ಆದೀನ ದಲ್ಲಿರುವ  ವಿವಿಧ ನಿಧಿಗಳಿಂದ  ನಿರ್ಮಿಸಿರುವ ಮಳಿಗೆಗಳನ್ನು 2005-2006 ನೇ ಸಾಲಿಗೆ ನವೆಂಬರ್  ತಿಂಗಳಿನಿಂದ ಜಾರಿಗೆ ಬರುವಂತೆ ಹರಾಜು ಮೂಲಕ ನೀಡಲು ಒಪ್ಪಿಗೆ ನೀಡುವ ವಿಚಾರ.

PDF Created with deskPDF PDF Writer - Trial :: http://www.docudesk.com

ತೀರ್ಮಾನ:19.

ಈ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. ದಿನಾಂಕ :– 30.10.2005 ರಂದು ಒಟ್ಟು 156 ಮಳಿಗೆಗಳ ಬಾಡಿಗೆ ಅವಧಿ ಮುಗಿದಿದ್ದು ಈವರೆಗೆ ಬಾಡಿಗೆಗೆ ಇದ್ದ ಮಳಿಗೆದಾರರು ಸಮೂಹಿಕವಾಗಿ ಮನವಿ ಸಲ್ಲಿಸಿ ತಮಗೆ ಈ ಮಳಿಗೆಗಳನ್ನು ಬಾಡಿಗೆಗೆ ಮುಂದುವರೆಸಲು ಕೋರಿರುವ ವಿಚಾರವನ್ನು ಸಹಾ ಚರ್ಚಿಸಲಾಯಿತು.ಅನೇಕ ಮಳಿಗೆದಾರರು ವ್ಯಾಪಾರ ಹಿತದೃಷ್ಟಿಯಿಂದ ಫರ್ನಿಚರ್ ಅಲಂಕಾರ್ ವೆಗ್ಯೆರೆ ಮಾಡಿಕೊಂಡು ಬಂಡವಾಳ ಹೂಡಿರುವುದರಿಂದ ಹಾಗು ಕಳೆದ ಮೂರು ವರ್ಷಗಳಲ್ಲಿ ಬರ ಪರಿಸ್ಥಿತಿಯಿಂದಾಗಿ ವ್ಯಾಪಾರ ವ್ಯವಹಾರ ಸರಿಯಾಗಿ ನಡೆಯದೆ ನಷ್ಟ  ಅನುಭವಿಸಿರುವ ಸಾಧ್ಯತೆಗಳನ್ನು ಪರಿಶೀಲಿಸಿ ಮನವಿ ನೀಡಿದ ಮಳಿಗೆಗಳ ಬಗ್ಗೆ ಬಾಡಿಗೆಯನ್ನು ಹಿರೇಮಗಳೂರಿನಲ್ಲಿರುವ ಮಳಿಗೆಗಳಿಗೆ ಮತ್ತು ಕೆ.ಎಂ. ರಸ್ತೆಯಲ್ಲಿರುವ ಟೆಂಡರ್ ಚಿಕನ್ ಮಳಿಗೆಗಳಿಗೆ ಶೇ 2 ರಂತೆ (ಕಾರಣ ಹಿರೇಮಗಳೂರಿನಲ್ಲಿರುವ ನಗರಸಭೆ ಮಳಿಗೆಗಳು ವ್ಯಾಪಾರ ವಹಿವಾಟು ಸ್ಥಳವಲ್ಲದೆ ಇರುವುದರಿಂದಲು ಹಾಗು ಕೆ.ಎಂ. ರಸ್ತೆಯಲ್ಲಿರುವ ಟೆಂಡರ್ ಚಿಕನ್ ಮಳಿಗೆಗಳಿಗೆ ಈಗಾಗಲೆ ಎಲ್ಲಾ ಮಳಿಗೆಗಳಿಗಿಂತ ಹೆಚ್ಚಿನ ಬಾಡಿಗೆ ನಿಗಧಿಯಾಗಿರುವುದರಿಂದ ಹಾಗು ನಗರದ ಮುಖ್ಯ ದ್ವಾರವನ್ನು ಸೌಂದರ್ಯ ಹೆಚ್ಚಿಸುವ ದೃಷ್ಟಿಯಿಂದ ಸ್ವತ: ಅವರೇ ಹೊಣೆ ಹೊತ್ತು ಕಟ್ಟಡಗಳನ್ನು ನಿರ್ವಹಣೆ ಮಾಡುತ್ತಿರುವುದರಿಂದ ಹೆಚ್ಚಿಸಲು ಉಳಿದ ನಗರಸಭೆಯ ಎಲ್ಲಾ ಮಳಿಗೆಗಳಿಗು ಶೇ 10 ರಷ್ಟು ಹೆಚ್ಚು ಮಾಡಿ (ಹಾಲಿ ಬಾಡಿಗೆ ಹೆಚ್ಚುವರಿ) ಹಾಲಿ ಮಳಿಗೆ ನಡೆಸುತ್ತಿರುವವರಿಗೆ 5 ವರ್ಷಗಳ ಅವಧಿಗೆ ಬಾಡಿಗೆಗೆ ನೀಡಬೇಕೆಂದು ಕಾಯ್ದೆ ಪ್ರಕಾರ ಅವರಿಂದ ರಿಜಿಸ್ಟರ್ ಕರಾರು ಪತ್ರ ಹಾಗು ತಲಾ ರೂ.25.000-00 ಮೊತ್ತವನ್ನು ಹಿರೇಮಗಳೂರು ಮತ್ತು ಟೆಂಡರ್ ಚಿಕನ್ ರವರಿಗೆ 5000-00 ಠೇವಣಿ ಪಡೆದುಕೊಳ್ಳಬೇಕೆಂದು ಈ ಬಗ್ಗೆ ಅಗತ್ಯತೆಯ ಪರಿಶೀಲಿಸಿ ಮುಂದುವರೆಸುವ ಅಧಿಕಾರ ನಗರಸಭೆಯ ಅಧ್ಯಕ್ಷರವರಿಗೆ ನೀಡಲು ಮತ್ತು 156 ಮಳಿಗೆಗಳಲ್ಲಿ 18 ಜನ  ಹಿಂದಿನ ಮಳಿಗೆ ಬಾಡಿಗೆದಾರರು ರೂ.9.38.636=00 ಮೊತ್ತವನ್ನು ಬಾಕಿ ಉಳಿಸಿಕೊಂಡು ಹಾಲಿ ಬಾಡಿಗೆದಾರರಿಗೆ ವಹಿಸಿಕೊಟ್ಟಿದ್ದು ಹಳೆಯ ಬಾಡಿಗೆ ಬಾಕಿ ವಸೂಲಾತಿ ಸೂಕ್ತ ಕ್ರಮ ಕೈಗೊಳ್ಳಲು ತಿಳುವಳಿಕೆಗಳನ್ನು ಜಾರಿ ಮಾಡಬೇಕೆಂದು ವಸೂಲಾತಿ ಕಷ್ಟಕರವಾದ್ದಲ್ಲಿ ಈ ಮೊತ್ತವನ್ನು ಕೈಬಿಡಲು ಸರ್ಕಾರವನ್ನು ಕೋರಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಹಾಗು ಹಿಂದಿನ ಬಾಡಿಗೆದಾರರು ಬಾಡಿಗೆಗೆ ಕೆಲವು ಮಳಿಗೆಗಳನ್ನು ನೀಡಿದ್ದು ಬಾಡಿಗೆ ವಸೂಲಾತಿ ದೃಷ್ಟಿಯಿಂದ ಒಳ ಬಾಡಿಗೆ ಪಡೆದವರಿಗೆ ಮಳಿಗೆಗಳನ್ನು ಮೇಲೆ ವಿವರಿಸಿದ ಪುನರ್ ನಿಗದಿತ ದರದಂತೆ ನೀಡಬಹುದೆಂದು ಹೊಸ ಬಾಡಿಗೆದಾರರಿಂದಲೆ ಕರಾರುಪತ್ರ ವೆಗ್ಯೆರೆ ಕಾಯ್ದೆ ಮಿತಿಯೊಳಗೆ ಬರೆಯಿಸಿಕೊಳ್ಳಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ :20:–ಶ್ರೀ ಆರ್ಮುಗಂ ಮಾಜಿ ನಗರಸಭಾ  ಸದಸ್ಯರು. ಚಿಕ್ಕಮಗಳೂರು ಇವರು ಮನವಿ ಸಲ್ಲಿಸಿ ಕ್ಯಾನ್ಸರ್ ಚಿಕಿತ್ಸೆಗಾಗಿ ಸಹಾಯ ಕೋರಿದ್ದು 2005-2006 ನೇ ಸಾಲಿನ ಆಯವ್ಯಯದಲ್ಲಿ ತೊಡಗಿಸಿಕೊಂಡಿರುವಂತೆ ಶೇ 18 ರಲ್ಲಿ ಧನಸಹಾಯ ನೀಡಲು ಒಪ್ಪಿಗೆ ನೀಡುವ ವಿಚಾರ.

ತೀರ್ಮಾನ :20:- ಈ ವಿಷಯವನ್ನು ಕೈಬಿಡಲಾಯಿತು.

ವಿಷಯ :21:-ಉಪನಿರ್ದೇಶಕರು ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಪತ್ರ ಸಂಖ್ಯೆ ಆರಾ: ಹಪಚೇ 1.04.2005 ದಿನಾಂಕ :– 27.09.2005 ರಂತೆ ನಗರ ಪ್ರದೇಶದ ವ್ಯಾಪ್ತಿಯಲ್ಲಿ ಬಿ.ಪಿ.ಎಲ್ ಅಂತ್ಯೋದಯ ಹಾಗು ಎ.ವಿ.ಎಲ್  ಸಮೀಕ್ಷೆ ಪಟ್ಟಿ ಸಿದ್ದಪಡಿಸಿರುವುದನ್ನು ಒಪ್ಪಿಗೆ ನೀಡುವ ವಿಚಾರ.

PDF Created with deskPDF PDF Writer - Trial :: http://www.docudesk.com

ತೀರ್ಮಾನ :21:–ಚಿಕ್ಕಮಗಳೂರು ನಗರ ಪ್ರದೇಶದಲ್ಲಿ ಹಳದಿ ಪಡಿತರ ಚೀಟಿ ಯೋಜನೆಯಡಿ ಪುನರ್ ಮನೆ–ಮನೆ ಸಮೀಕ್ಷೆಯಲ್ಲಿ ಗುರುತಿಸಲಾಗಿರುವ ಅನ್ನಪೂರ್ಣ , ಅಂತ್ಯೋದಯ ಮತ್ತು ಬಿ.ಪಿ.ಎಲ್. ಕುಟುಂಬಗಳ ಪಟ್ಟಿಯನ್ನು ಅನುಮೋದಿಸುವ ಬಗ್ಗೆ.

ಚಿಕ್ಕಮಗಳೂರು ನಗರ ಪ್ರದೇಶದಲ್ಲಿ ಪುನರ್ ಮನೆ–ಮನೆ ಸಮೀಕ್ಷೆ ಕಾರ್ಯ ಪೂರ್ಣಗೊಂಡಿದ್ದು 9735 ಬಿ.ಪಿ.ಎಲ್. ಕುಟುಂಬಗಳನ್ನು 1093 ಅಂತ್ಯೋದಯ ಕುಟುಂಬಗಳನ್ನು ತಾತ್ಕಾಲಿಕವಾಗಿ ಗುರುತಿಸಲಾಗಿತ್ತು. ಆದರೆ ಸಪ್ಟೆಂಬರ್ 15ಕ್ಕೆ ಸಮೀಕ್ಷಾ ಕಾರ್ಯವು ಪೂರ್ಣಗೊಂಡಿದ್ದು ಅಂತಿಮ ವರದಿಯಲ್ಲಿ 11271 ಬಿಪಿಎಲ್ ಕುಟುಂಬಗಳು 1093 ಅಂತ್ಯೋದಯ ಕುಟುಂಬಗಳು ಹಾಗೂ 72 ಅನ್ನಪೂರ್ಣ ಯೋಜನೆಯಡಿಯಲ್ಲಿ ಬರುವ ಕುಟುಂಬಗಳನ್ನು ಗುರುತಿಸಲಾಗಿದೆ. ಆದ್ದರಿಂದ ಈಗ ಗುರುತಿಸಲಾಗಿರುವ11271 ಬಿಪಿಎಲ್ 1093 ಅಂತ್ಯೋದಯ, 72 ಅನ್ನಪೂರ್ಣ ಯೋಜನೆ ಹಾಗೂ 15944 ಎಪಿಎಲ್ ಕುಟುಂಬಗಳ ಪಟ್ಟಿಗೆ ಅನುಮೋದನೆ ನೀಡಲು ಸಭೆಯಲ್ಲಿ ಕೋರಲಾಗಿದ್ದು. ಸಭೆಯು ಮೇಲ್ಕಂಡಂತೆ ಗುರುತಿಸಿರುವ ಕುಟುಂಬಗಳ ಪಟ್ಟಿಗೆ ಅನುಮತಿಯನ್ನು ನೀಡಿತು ಹಾಗೂ ಸಮೀಕ್ಷೆಯಲ್ಲಿ ಕುಟುಂಬಗಳು ವಲಸೆ ಹೋಗಿದ್ದಲ್ಲಿ ಅಂತಹ ಬಿಟ್ಟುಹೋದ ಕುಟುಂಬಗಳು ಶೇ 2 ಇರಬಹುದೆಂದು. ಅಂತಹ ಕುಟುಂಬಗಳವರು ಬಂದಲ್ಲಿ ಆದ್ಯತೆ ನೀಡಿ ಅರ್ಹತೆ ಮೇರೆಗೆ ಪಡಿತರ ಚೀಟಿಗಳನ್ನು ಅವರಿಗೆ ನೀಡಲು ಸಭೆಯು ಒತ್ತಾಯಿಸಿತು.

ವಿಷಯ :22:- ಚಿಕ್ಕಮಗಳೂರು ನಗರದಲ್ಲಿ ಉದ್ದಿಮೆ ಪರವಾನಗಿ ಕುರಿತು ಶುಲ್ಕವನ್ನು ಪರಿಷ್ಕರಿಸಿ ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ:– 14-07-2005 ರಂದು ಪ್ರಕಟಿಸಿ ಸಾರ್ವಜನಿಕ ಆಕ್ಷೇಪಣೆ ಆಹ್ವಾನಿಸಿದ್ದು ಈ ಕುರಿತು ಯಾವುದೇ ಆಕ್ಷೇಪಣೆಗಳು ಕಛೇರಿಗೆ ಬಾರದಿರುವುದರಿಂದ ದಿನಾಂಕ :- 14.07.2005 ರ ಸಾರ್ವಜನಿಕ ಪ್ರಕಟಣೆಯನ್ನು ಅಧಿಕೃತಗೊಳಿಸಿ ಕ್ರಮಕ್ಕೈಗೊಳ್ಳುವ ವಿಚಾರ.

ತೀರ್ಮಾನ: 22:- ಈ ಬಗ್ಗೆ ಚರ್ಚಿಸಲಾಯ್ತು. ದಿನಾಂಕ 14:7:2005 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ಉದ್ದಿಮೆ ಪರವಾನಗಿ ದರಗಳ ಕುರಿತು ಸಾರ್ವಜನಿಕ ಆಕ್ಷೇಪಣೆ ಬಾರದ ಪ್ರಯುಕ್ತ ದಿನಾಂಕ 14-7-2005 ರಂದು ಪ್ರಚಾರ ಪಡಿಸಿದ ದರಗಳನ್ನು ಅಂತಿಮವಾಗಿ ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ :–23:- ಚಿಕ್ಕಮಗಳೂರು ಸರ್ವೆ ನಂಬರ್ 526 ರಲ್ಲಿನ 13.4 ಎಕರೆ ಭೂಮಿಯಲ್ಲಿ ಕೈಗಾರಿಕಾ ವಸಹಾತು ಪ್ರದೇಶವಿದ್ದು. ಈ ಪ್ರದೇಶದ ಮೂಲ ಭೂತ ಸೌಕರ್ಯ ನಿರ್ವಹಣೆಗಾಗಿ ನಗರಸಭೆಗೆ ಮಾನ್ಯ ಜಿಲ್ಲಾಧಿಕಾರಿಗಳ ಪತ್ರ ನಂ:ಡಿಯುಡ ಸಿ (3) 435/04-05 ದಿ:–17:3:05 ರ ಅನ್ವಯ ದಿನಾಂಕ: 28:9:2005 ರಂದು ಕೌನ್ಸಿಲ್ ಸಭೆ ಅನುಮತಿ ನಿರೀಕ್ಷಣೆ ಮೇರೆಗೆ ವಹಿಸಿ ಕೊಂಡಿರುವುದನ್ನು ಅನುಮೋದಿಸುವ ವಿಚಾರ.

ತೀರ್ಮಾನ:–23:– ಈ ಬಗ್ಗೆ ಚರ್ಚಿಸಲಾಯ್ತು. ನಗರದ ಕೈಗಾರಿಕಾ ವಸಹಾತು ಪ್ರದೇಶವನ್ನು ನಾಗರೀಕ ಸೌಲಭ್ಯನಿರ್ವಹಣೆಗಾಗಿ ವಹಿಸಿಕೊಂಡಿರುವುದನ್ನು ಸರ್ವಾನುಮತದಿಂದ ಅಂಗಿಕರಿಸಬೇಕೆಂದು ತೀರ್ಮಾನಿಸಲಾಯಿತು.

ವಿಷಯ:– 24:– ಭಾರತದ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ಆಧುನಿಕ ಕಸಾಯಿ ಖಾನೆ ನಿರ್ಮಾಣ ಮತ್ತೆ ಇಲ್ಲಿಂದ ಹೊರಹೊಮ್ಮುವ ತ್ಯಜ್ಯ ನೀರು ಮತ್ತು ಕಸವನ್ನು ವೈಜ್ಞಾನಿಕವಾಗಿ ಶುದ್ದಿಕರಣ ಮಾಡುವ ಘಟಕ ನಿರ್ಮಿಸುವ ಕುರಿತು ಚರ್ಚಿಸುವ ವಿಚಾರ.

PDF Created with deskPDF PDF Writer - Trial :: http://www.docudesk.com

ತೀರ್ಮಾನ:24:- ಈ ವಿಷಯದ ಬಗ್ಗೆ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಗಿ ಮಾರ್ಕೆಟ್ ರಸ್ತೆಯಲ್ಲಿ ಹಾಲಿ ಇರುವ ಹಳೆಯ ಕಸಾಯಿ ಖಾನೆ ಕಟ್ಟಡ ಮತ್ತು ಕುರಿ ಮಾಂಸದ ಅಂಗಡಿ ಮೀನು ಮತ್ತು ಕೋಳಿ ಮಾಂಸದ ಮಾರಾಟ ಇದ್ದು ಅದೇ ಆವರಣದಲ್ಲಿ ಉರ್ದುಶಾಲೆ ಹಾಗೂ ಅಂಗನವಾಡಿ ಕಟ್ಟಡ ಇದ್ದು ಇದರಿಂದ ಮ ಕ್ಕಳಿಗೆ ವಾತಾವರಣದ ವ್ಯವಸ್ಥೆ ಸರಿ ಇಲ್ಲದ ಕಾರಣ ಹಾಗೂ ಕಟ್ಟಡಗಳು ಶಿಥಿಲವಾಗಿರುವುದರಿಂದ ಮಕ್ಕಳಿಗೆ ತೊಂದರೆ ಉಂಟಾಗಿರುತ್ತದೆ. ಆದುದರಿಂದ ಉರ್ದುಶಾಲೆ ಹಾಗೂ ಅಂಗನವಾಡಿ ಕೇಂದ್ರವನ್ನು ಸಂತೆ ಮೈದಾನದಲ್ಲಿ ನಿರ್ಮಾಣ ಮಾಡಿರುವ ನಿರ್ಮಲ ನಗರ ಶೌಚಾಲಯದ ಪಕ್ಕ ಇರುವ ಖಾಲಿ ಜಾಗದಲ್ಲಿ ನಿರ್ಮಾಣ ಮಾಡಲು ಹಾಗೂ ಹಾಲಿ ಇರುವ ಹಳೆ ಕಸಾಯಿ ಖಾನೆ ಕಟ್ಟಡ ಮತ್ತು ಅಂಗಡಿಗಳು ಮತ್ತು ಶಾಲೆ ತೆರವಾದ ಜಾಗ ಹೊಸದಾಗಿ ಮೈಸೂರಿನ ಸಿಎಫ್‌ಟಿಆರ್ ರವರು ತಯಾರಿಸಿರುವ ಆಧುನಿಕ ಕಸಾಯಿಖಾನೆ ಮನೆ ಮತ್ತು ಅಂಗಡಿ ಮಳಿಗೆಗಳನ್ನು ನಿರ್ಮಿಸಲು ಅಂದಾಜು ಪಟ್ಟಿ ತಯಾರಿಸಿ ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ರವರಿಗೆ ಪ್ರಸ್ತಾವನೆ ಸಲ್ಲಿಸಲು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

ವಿಷಯ:25:– ದಿನಾಂಕ 18: 7:05 ರಂದು ಕರೆದಂತಹ ಒಟ್ಟು (80) ಕಾಮಗಾರಿಗಳಲ್ಲಿ ಗುತ್ತಿಗೆದಾರರು ಟೆಂಡರ್ ಸಲ್ಲಿಸಿರುವ ಕಾಮಗಾರಿಗಳಲ್ಲಿ ನ ಕಡಿಮೆ ದರವನ್ನು ಅಂಗೀಕರಿಸಿ ಕಾರ್ಯಾದೇಶ ನೀಡುವ ವಿಚಾರ.

ತೀರ್ಮಾನ:–25:– ಸರ್ವಾನುಮತದಿಂದ ಒಪ್ಪಲಾಯಿತು.

ವಿಷಯ 26:– ದಿನಾಂಕ 15/9/05 ರಂದು ಕರೆದಂತೆ ಕಛೇರಿಯಲ್ಲಿನ ಗಣಕೀಕರಣ ವಿಭಾಗಕ್ಕೆ ಒಂದು ಯು.ಪಿ.ಎಸ್. ಖರೀದಸಲು ಹಾಗೂ ರಾತ್ರಿ ಕಾವಲುಗಾರರನ್ನು ನೇಮಿಸುವುದಕ್ಕೆ ಟೆಂಡರ್ ದರಗಳಲ್ಲಿನ ಕಡಿಮೆ ದರವನ್ನು ಅಂಗೀಕರಿಸುವ ವಿಚಾರ.

ತೀರ್ಮಾನ 26 :– ಸರ್ವಾನುಮತದಿಂದ ಒಪ್ಪಲಾಯಿತು.

ವಿಷಯ27:– ದಿನಾಂಕ:– 26:8:2005 ರಂದು ಕರೆದಂತಹ ಒಟ್ಟು (8) ಕಾಮಗಾರಿಗಳನ್ನು ಗುತ್ತಿಗೆದಾರರು ಟೆಂಡರ್ ಸಲ್ಲಿಸಿರುವ ಕಾಮಗಾರಿಗಳಲ್ಲಿನ ಕಡಿಮೆ ದರವನ್ನು ಅಂಗೀಕರಿಸಿ ಕಾರ್ಯಾದೇಶ ನೀಡುವ ವಿಚಾರ.

ತೀರ್ಮಾನ:27:– ಸರ್ವಾನುಮತದಿಂದ ಒಪ್ಪಲಾಯಿತು.

ವಿಷಯ:28:- ಚಿಕ್ಕಮಗಳೂರು ನಗರದ ಸಂತೆ ಮೈದಾನ ಅಭಿವೃದ್ಧಿ ಪಡಿಸುವ ವಿಚಾರ.

ತೀರ್ಮಾನ:–28:- ಈ ವಿಷಯದ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಗಿ ಸಂತೇ ಮೈದಾನದಲ್ಲಿ ತಯಾರಿಸಿರುವ ಅಭಿವೃದ್ಧಿ ನಕ್ಷೆಯನ್ನು ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ಅಭಿವೃದ್ಧಿ ಪಡಿಸಲು ಪ್ರಸ್ತವನೆ ತಯಾರಿಸಿ ಮಾನ್ಯ ಜಿಲ್ಲಾಧಿಕಾರಿಗಳವರಿಗೆ ಸಲ್ಲಿಸಲು ಸಭೆಯು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

1)ಹಾಲಿ ಇರುವ ಸಂತೇ ಮೈದಾನದಲ್ಲಿ ರಸ್ತೆ ಚರಂಡಿ ಹಾಗೂ ಕಲ್ವರ್ಟ್ ಮತ್ತು ಶಟರ್‌ಗಳನ್ನು ದುರಸ್ಥಿಗೊಳಿಸುವುದು.

2)ಸಂತೆ ಮೈದಾನದ ಮಧ್ಯಭಾಗ ಇರುವ ದಾಸ್ತಾನು ಮಳಿಗೆಗಳನ್ನು ಸಂತೆ ಮೈದಾನದಿಂದ ಟ್ಯಾಂಕ್‌ಪಾರ್ಕನ ಖಾಲಿ ಜಾಗದಲ್ಲಿ ಹೊಸದಾಗಿ ದಾಸ್ತಾನು ಮಳಿಗೆ ನಿರ್ಮಾಣ ಮಾಡಲು ಹಾಗೂ ಸಂತೇ ಮೈದಾನದ ಮಧ್ಯ ಇರುವ ದಾಸ್ತಾನು ಮಳಿಗೆಗಳನ್ನು ಶೆಲ್ಟರ್‌ಗಳನ್ನಾಗಿ ಪರಿವರ್ತನೆ ಮಾಡುವುದು.

3) ಸಂತೇ ಮೈದಾನದಲ್ಲಿದ್ದ ಟ್ಯಾಂಕ್ ಪಾರ್ಕ್‌ನ್ನು ನಿರ್ಮಲ ನಗರಯೋಜನೆ ಶೌಚಾಲಯದ ಹಿಂಭಾಗ ಇರುವ ಖಾಲಿ ಜಾಗದಲ್ಲಿ ಅರ್ಧಭಾಗ ಪಾರ್ಕ್ ಉಳಿದ ಅರ್ಧ ಭಾಗದಲ್ಲಿ ಮಟನ್ ಮಾರ್ಕೆಟ್ ಬಳಿ ಇರುವ

PDF Created with deskPDF PDF Writer - Trial :: http://www.docudesk.com

ಉರ್ದು ಶಾಲೆ ಮತ್ತು ಒಂದು ಅಂಗನವಾಡಿ ಹಾಗೂ ಖಾಲಿ ಸಂತೇ ಮೈದಾನದಲ್ಲಿ ಇರುವ ಅಂಗನವಾಡಿಯು ಒಟ್ಟು ಮೂರು ಕಟ್ಟಡಗಳನ್ನು ನಿರ್ಮಾಣಾ ಮಾಡುವುದು.

4) ಸಂತೇ ಮೈದಾನದಲ್ಲಿ ಹಾಲಿ ಇರುವ ಮಿಲನ್ ಮಹಿಳಾ ಮಂಡಳಿ ಶೌಚಾಲಯವನ್ನು ಕೆಡವಿ ಹೊಸದಾಗಿ ಆಧುನಿಕ ಶೌಚಾಲಯ ಹಾಗೂ ಸ್ನಾನದ ಗೃಹವನ್ನು ನಿರ್ಮಾಣ ಮಾಡುವುದು.

5) ಸಂತೇ ಮೈದಾನದಲ್ಲಿ ಹಾಲಿ ಇರುವ ಆಂಗಡಿಗಳು (ಬಾಗಿಲು ಇಲ್ಲದೆ ಇರುವ ಆಂಗಡಿಗಳು) ಕೆಡವಿ ಹೊಸದಾಗಿ ದಿನನಿತ್ಯದ ತರಕಾರಿ ಮಾರುಕಟ್ಟೆ ನಿರ್ಮಾಣ ಮಾಡುವುದು.ಹಾಗು ಹಳೆಯ ಸಾಮಾಗ್ರಿಗಳನ್ನು ಹರಾಜು ಮಾದುವುದು.

6) ಸಂತೇ ಮೈದಾನದಲ್ಲಿ ನಿರ್ಮಲ ನಗರ ಯೋಜನೆಯಲ್ಲಿ ನಿರ್ಮಾಣವಾಗಿರುವ ಶೌಚಾಲಯ ಪಕ್ಕ ಖಾಲಿ ಇರುವ ಜಾಗದಲ್ಲಿ ವಾಹನ ನಿಲ್ದಾಣ ಮಾಡುವುದು.

7) ಮಾರ್ಕೆಟ್ ರಸ್ತೆಯಲ್ಲಿ ಇರುವ ನಗರಸಭ ಮಳಿಗೆಗಳ ಹಿಂಭಾಗದಲ್ಲಿ ಹೊಸದಾಗಿ ಮಳಿಗೆಗಳನ್ನು ನಿರ್ಮಿಣ ಮಾಡಿ ಮುಂಭಾಗ ಹೊಡೆಯುವುದು.

ವಿಷಯ:-29:- ಚಿಕ್ಕಮಗಳೂರು ನಗರದಲ್ಲಿ ಐ.ಡಿ.ಎಸ್.ಎಂ.ಟಿ. ಯೋಜನೆಯಾದಿಯಲ್ಲಿ ಟ್ರಕ್ ಟರ್ಮಿನಲ್ ನಿರ್ಮಿಸುವ ವಿಚಾರ.

ತೀರ್ಮಾನ: 29:- ಈ ಬಗ್ಗೆ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಗಿ ಐಡಿಎಸ್ಎಂಟಿ ಯೋಜನೆ ಅಡಿಯಲ್ಲಿ ಟ್ರಕ್ ಟರ್ಮಿನಲ್ ನಿರ್ಮಿಸುವುದನ್ನು ಕೈಬಿಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಹಾಗೂ ಸಂತೇ ಮೈದಾನದ ಪೆಟ್ರೋಲ್ ಬಂಕ್ ಹಾಗೂ ಟೆಂಡರ್ ಚಿಕನ್ ಮಳಿಗೆಗಳ ಹಿಂಭಾಗ ಖಾಲಿ ಇರುವ ಜಾಗಕ್ಕೆ ಲಾರಿ ಹಾಗೂ ಮಿನಿಟ್ರಕ್‌ಗಳು ನಿಲ್ಲಲು ತಯಾರಿಸಿರುವ ನಕ್ಷೆಯಂತೆ ಮೂಲ ಭೂತ ಸೌಕರ್ಯವನ್ನೊಳಗೊಂಡ ತಾತ್ಕಾಲಿಕ ಭಾರೀ ವಾಹನ ತಂಗುದಣವನ್ನು ನಿರ್ವಸಭುದೆಂದು ಈ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳವರಿಗೆ ಪ್ರಸ್ತಾವನೆ ಸಲ್ಲಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಲಿರುವ ವಿಷಯಗಳು:-

30/1 ವಾರ್ಡ್ ನಂಬರ್ 15ರ ಅರಫ ಹೋಟೆಲ್ ರಸ್ತೆಯಲ್ಲಿ 2 ಮ್ಯಾನ್ ಹೋಲ್ ನಿರ್ಮಾಣ ಮಾಡುವ ವಿಚಾರ.

ತೀರ್ಮಾನ:- ಒಪ್ಪಲಾಯಿತು.

30/2 ವಾರ್ಡ್ ನಂಬರ್ 23 ಆರ್ಮುಗಂ ರಸ್ತೆ ಗೆಡೆಕ್ ಸ್ಲಾಬ್ ನಿರ್ಮಾಣ ಮಾಡುವ ವಿಚಾರ.

ತೀರ್ಮಾನ:- ಒಪ್ಪಲಾಯಿತು.

30/3 ವಾರ್ಡ್ ನಂಬರ್ 22 ಆಶೀರ್ವಾದ ಆಸ್ಪತ್ರೆ ಹಿಂಭಾಗ ಬಾಕ್ಸ್ ಚರಂಡಿ ನಿರ್ಮಾಣ ಮಾಡುವ ವಿಚಾರ.

ತೀರ್ಮಾನ:- ಒಪ್ಪಲಾಯಿತು.

30/4 ವಾರ್ಡ್ ನಂಬರ್23 ಜನರಲ್ ಕಾರ್ಯಪ್ಪ ಪಾರ್ಕ್ ಶ್ರೀ ಉತ್ತಯ್ಯರವರ ಮನೆ ಮುಂಭಾಗದ ಪಾರ್ಕ್ ಅಭಿವೃದ್ಧಿ ಪಡಿಸುವ ವಿಚಾರ.

ತೀರ್ಮಾನ:- ಒಪ್ಪಲಾಯಿತು.

PDF Created with deskPDF PDF Writer - Trial :: http://www.docudesk.com

30(5) 4 ನೇ ವಾರ್ಡ್ ಡಾ।। ಕುಮಾರಸ್ವಾಮಿ ಮನೆ ಮೂರು ಮನೆಹಳ್ಳಿಗೆ ಸೇರುವ ರಸ್ತೆಯವರೆಗೆ ಜಲ್ಲಿ ಹಾಕಿ ಅಭಿವೃದ್ಧಿ ಪಡಿಸುವ ವಿಚಾರ.
ತೀರ್ಮಾನ:– ಸರ್ವಾನುಮತದಿಂದ ಒಪ್ಪಲಾಯಿತು.

30(6) 4ನೇ ವಾರ್ಡ್ ಡಾ।। ಕುಮಾರಸ್ವಾಮಿ ಮನೆಯಿಂದ ಮೂರು ಮನೆ ಹಳ್ಳಿಗೆ ಸೇರುವ ರಸ್ತೆಯವರೆಗೆ ಬಾಕ್ಸ್ ಚರಂಡಿ ನಿರ್ಮಿಸುವ ವಿಚಾರ.
ತೀರ್ಮಾನ:– ಒಪ್ಪಲಾಯಿತು.

30(7)4ನೇ ವಾರ್ಡ್ ಮೂರುಮನೆಹಳ್ಳಿ ರಸ್ತೆಗೆ ಡೆಕ್ ಸ್ಲ್ಯಾಬ್ ನಿರ್ಮಾಣ ಮಾಡಿ ಅಕ್ಕ ಪಕ್ಕದ ರಸ್ತೆಗಳಿಗೆ ಜಲ್ಲಿ ಹಾಕುವುದು.
ತೀರ್ಮಾನ:– ಒಪ್ಪಲಾಯಿತು.

30(8) ವಾರ್ಡ್ ನಂಬರ್ 5 ರ ಆರ್.ಟಿ.ಓ ಆಫೀಸ್ ಹಿಂಭಾಗದ ಸೀತಾರಾಂ ಮನೆ ರಸ್ತೆಗೆ ಜಲ್ಲಿರಸ್ತೆ ನಿರ್ಮಾಣ ಮಾಡಲು ಒಪ್ಪುವ ವಿಚಾರ.
ತೀರ್ಮಾನ:– ಒಪ್ಪಲಾಯಿತು.

30(9) ವಾರ್ಡ್ ನಂಬರ್ 5ರ ಕುವೆಂಪು ನಗರ ಹೊಸಾಬಡಾವಣೆ ಶಿವರಾಮು ಮನೆಯಿಂದ ಕೃಷ್ಣ ಮನೆಯವರೆಗೆ ಜಲ್ಲಿ ರಸ್ತೆ ನಿರ್ಮಾಣ ಮಾಡಲು ಒಪ್ಪುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(10) ವಾರ್ಡ್ ನಂಬರ್ 13 ರ ಉಪ್ಪಳ್ಳಿ ಹೊಸ ಬಡಾವಣೆ ಶ್ರೀ ಜಮ್‌ಶದ್‌ಖಾನ್‌ರವರ ಮನೆಯಿಂದ ಶ್ರೀ ರೆಹಮಾನ್ ರವರ ಮನೆಯವರೆಗೆ ಹೊಸದಾಗಿ ಪೈಪ್ ಲೈನ್ ಮಾಡುವ ವಿಚಾರ.
ತೀರ್ಮಾನ:– ಒಪ್ಪಲಾಯಿತು.

30(11) ವಾರ್ಡ್ ನಂಬರ್ 19 ರಲ್ಲಿ ತಮಿಳು ಕಾಲೋನಿ ಮುಬಾರಕ್ ಮನೆಯ ಪಕ್ಕದಲ್ಲಿ ಚರಂಡಿ ನಿರ್ಮಿಸಲು ಒಪ್ಪುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(12) ವಾರ್ಡ್ ನಂಬರ್ 5 ರ ಅಕ್ಷಯ ಸರ್ಕಲ್ ಬಳಿ ಮಿನಿ ನೀರು ಸರಬರಾಜು ಟ್ಯಾಂಕ್ ನಿರ್ಮಿಸಲು ಒಪ್ಪುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(13) ವಾರ್ಡ್ ನಂಬರ್ 5 ರ ಆರ್.ಟಿ.ಓ. ಆಫೀಸ್ ಹಿಂಭಾಗ ಮರಿಯಣ್ಣ ಮನೆಯ ಹತ್ತಿರ ಕಿರು ನೀರು ಸರಬರಾಜು ಘಟಕ ನಿರ್ಮಿಸಲು ಒಪ್ಪುವ ವಿಚಾರ.
ತೀರ್ಮಾನ:– ಒಪ್ಪಲಾಯಿತು.

PDF Created with deskPDF PDF Writer - Trial :: http://www.docudesk.com

30(14) ವಾರ್ಡ್ ನಂಬರ್ 5 ರ ಶೇಷಪ್ಪನ ಬೀದಿಯಲ್ಲಿ ಹೊಸದಾಗಿ ಡೆಕ್ ಸ್ಲ್ಯಾಬ್ ನಿರ್ಮಿಸುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(15) ವಾರ್ಡ್ ನಂಬರ್ 9 ರ ಚಿಕ್ಕಮ್ಮ ದೇವಸ್ಥಾನ ರಸ್ತೆಯಲ್ಲಿ ಮಿನಿ ಟ್ಯಾಂಕ್ ನಿರ್ಮಿಸಿ ನೀರು ಸರಬರಾಜು ಮಾಡುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(16) ವಾರ್ಡ್ ನಂಬರ್ 29 ರ ವ್ಯಾಪ್ತಿಯ ರತ್ನಗಿರಿ ಬಡಾವಣೆ ಯೂಸುಫ್ ರವರ ಮನೆಯಿಂದ ಇಂಡಿಯಾ ಬ್ಯಾಂಕ್ ಮಹೇಶ್ ರವರ ಮನೆಯವರೆಗೆ ಚರಂಡಿ ಕುಸಿದಿದ್ದು ಬಾಕ್ಸ್ ಡ್ರೈನ್ ಮಾಡಲು ಒಪ್ಪುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(17) ಚಂದ್ರಕಟ್ಟೆ ಬೋರ್ ವೆಲ್ ನಿಂದ ಕೆಂಪನಹಳ್ಳಿಗೆ ನೀರು ಸರಬರಾಜು ಮಾಡಲು ಹೊಸದಾಗಿ ಪೈಪ್ ಲೈನ್ ಹಾಕುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(18) ತಿಪ್ಪಮ್ಮನವರ ಮನೆಯಿಂದ ಕೆಂಪನಹಳ್ಳಿ ಮುಖ್ಯ ರಸ್ತೆಯಲ್ಲಿರುವ ಪೈಪ್ ಲೈನ್‌ಗೆ 2 ಇಂಡಾ ಪೈಪ್ ಲೈನ್ ಅಳವಡಿಸಿ ಲಿಂಕ್ ಮಾಡಿ ನೀರು ಸರಬರಾಜು ಮಾಡುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(19) 31 ನೇ ವಾರ್ಡ್ ಸೀಮೇಎಣ್ಣೆ ರಾಮಚಂದ್ರರವರ ಮನೆಯ ಹತ್ತಿರದಲ್ಲಿರುವ ನೂರಾನ ಮಸೀದಿ ಹಿಂಭಾಗ ಬೋರ್ವೆಲ್‌ಗೆ ಹೊಸದಾಗಿ ಮೋಟಾರ್ಗಳನ್ನು ಅಳವಡಿಸಿ ಮಿನಿ ವಾಟರ್ ಟ್ಯಾಂಕ್ ನಿರ್ಮಿಸಿ ನೀರು ಸರಬರಾಜು ಮಾಡುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(20)ವಾರ್ಡ್ ನಂ 31 ಗೌರೀ ಕಾಲುವೆ ಆಜ಼ಾದ್ ರಸ್ತೆ ಕಾರ್ಪೆಂಟರ್ ಮನೆಯ ಮುಂಭಾಗದಲ್ಲಿರುವ ಬೋರ್ವೆಲ್‌ಗೆ ಮೋಟಾರ್ ಅಳವಡಿಸಿ ಕಿರು ನೀರು ಸರಬರಾಜು ಮಾಡುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(21) ವಾರ್ಡ್ ನಂ 31 ನೆಹರು ನಗರ ಆಲಿಜಾನ್ ಮನೆ ಮುಂಭಾಗದಲ್ಲಿರುವ ಬೋರ್ವೆಲ್‌ಗೆ ಕಿರುನೀರು ಸರಬರಾಜು ಘಟಕ ಆಳವಸಿ ನೀರುಸರಬರಾಜು ಮಾಡುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

PDF Created with deskPDF PDF Writer - Trial :: http://www.docudesk.com

30(22) ವಾರ್ಡ್ ನಂ. 29 ರ ಕೆಂಪನಹಳ್ಳಿ ಹರಿಜನ ಕಾಲೋನಿಯಲ್ಲಿ ಬಾವಿಕಟ್ಟಡ ಕುಸಿದಿದ್ದು ಅದನ್ನು ಶೇ 18 ರಲ್ಲಿ ದುರಸ್ಥಿ ಪಡಿಸುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(23) ವಾರ್ಡ್ ನಂ.29 ಕೆಂಪನಹಳ್ಳಿ ಮುಖ್ಯ ರಸ್ತೆಯಿಂದ ಸಾಮಿಲ್ ಒಳ ಭಾಗದಲ್ಲಿ ಹಾದು ಹೋಗುವ ರಸ್ತೆ ಹಾಗೂ ಶ್ರೀ ಶನೇಶ್ವರ ದೇವಸ್ಥಾನದ ವರೆಗೂ ರಸ್ತೆ ಅಭಿವೃದ್ಧಿ ಪಡಿಸುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(24) ವಾರ್ಡ್ ನಂ 10 ಶಂಕರಪುರ ಹೇಮಾವತ್ತಿ ರಸ್ತೆಯ ಶ್ರೀ ಗಣೇಶ ರವರ ಮನೆಗೂ ಪಕ್ಕದಲ್ಲಿ ಒಂದು ಮಿನಿ ಟ್ಯಾಂಕ್ ನಿರ್ಮಿಸುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(25)ವಾರ್ಡ್ ನಂ 10 ಶಾಂತಿನಗರದಲ್ಲಿ ಕುಮಾರ್ ಮನೆಯಿಂದ ಶ್ರೀ ಬಾಷ ಮನೆಯವರೆಗೆ ಚರಂಡಿ ನಿರ್ಮಾಣ ಮಾಡುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

20(26) ವಾರ್ಡ್ ನಂ 10 ರ ಶಾಂತಿ ನಗರದಲ್ಲಿ ಒಳಚರಂಡಿ ಪೈಪ್ ಲೈನ್ ಎಳೆಯುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(27) ವಾರ್ಡ್ ನಂ. 10 ಶಾಂತಿನಗರ ಶಂಕರೇಗೌಡರ ಮನೆಯಿಂದ ಪುಷ್ಪರಾಜ್ ಮನೆವರೆಗೆ ಸ್ಲ್ಯಾಬ್ ನಿರ್ಮಾಣ ಮಾಡುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(28) ವಾರ್ಡ್ ನಂ.24ರ ಗೌರಿಕಾಲುವೆ ಪ್ರದೇಶದ ಅಂಗನವಾಡಿ ಕೇಂದ್ರ ದುರಸ್ಥಿ ಪಡಿಸುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(29) ವಾರ್ಡ್ ನಂ 10 ಶಂಕರಪುರ 3ನೇ ಕ್ರಾಸ್‌ನಲ್ಲಿ ಹೊಸದಾಗಿ 2 $^{1}/_{2}$ಪಿ.ವಿ.ಸಿ ಪೈಪ್ ಲೈನ್ ಕಾಮಗಾರಿಯನ್ನು ಮಾಡಲು ಒಪ್ಪುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

PDF Created with deskPDF PDF Writer - Trial :: http://www.docudesk.com

30(30)ವಾರ್ಡ್ ನಂ. 15ರ ಬಸ್ ನಿಲ್ದಾಣದ ಬಳಿ ಪಶುವೈಧ್ಯ ಆಸ್ಪತ್ರೆ ಬಳಿ ಹೊಸದಾಗಿ ಮ್ಯಾನ್ ಹೋಲ್ ನಿರ್ಮಾಣ ಮಾಡುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(31) 1 ನೇ ವಾರ್ಡ್ ಹೌಸಿಂಗ್ ಒಂದನೇ ಹಂತದಲ್ಲಿ 4’’ ಪಿ.ವಿ.ಸಿ
ಪೈಪ್ ಲೈನ್ ಎಳೆಯುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(32) 1 ನೇ ವಾರ್ಡ್ ಹೌಸಿಂಗ್ ಬೋಡ್ ಕಾಲೋನಿ ಸರ್ಕಾರಿ ಪಾಪೂ। ಪಾಠಶಾಲೆ 1 $^{1}/_{2}$" ಪಿ.ವಿ.ಸಿ ಪೈಪ್ ಲೈನ್ ಅಳವಡಿಸುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(33) 16ನೇ ವಾರ್ಡ್ M.G. ರಸ್ತೆಯಿಂದ ಬಂಡಿಮೋಟ್ ಬಡಾವಣೆಯ ವರೆಗೆ ಹೊಸದಾಗಿ 2 $^{1}/_{2}$" ಪಿ.ವಿ.ಸಿ ಪೈಪ್ ಲೈನ್ ಎಳೆಯುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(34) 28 ನೇ ವಾರ್ಡ್ ಬಸವನಹಳ್ಳಿ ಕುಂಬಾರ ಬೀದಿಯ ಲ್ಲಿ ಹೊಸದಾಗಿ ಒಳಚರಂಡಿ ಮ್ಯಾನ್ ಹೋಲ್ ನಿರ್ಮಾಣ ಮಾಡುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(35) ವಾರ್ಡ್ ನಂ. 5 ಹೊಸಮನೆ ಹಿಂಭಾಗದ ನಾಲೆಯಿಂದ ಸೀತಾರಾಮು ಮನೆಯವರೆಗೆ ಕೊಳಯಿ ಮಾರ್ಗ ಎಳೆಯುವ ಹಾಗೂ ಕಿರು ನೀರು ಸರಬರಾಜು ಘಟಕ ನಿರ್ಮಿಸಲು ಒಪ್ಪುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(36) ವಾರ್ಡ್ ನಂ. 20 ಗರಡಿ ಮನೆ ರಸ್ತೆಯಲ್ಲಿ 2 $^{1}/_{2}$" ಪಿ.ವಿ.ಸಿ ಪೈಪ್ ಲೈನ್ ಎಳೆಯುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(37) ವಾರ್ಡ್ ನಂ. 2 ರ ಮಾಚೀದೇವಯ್ಯನ ರಸ್ತೆಗೆ ಕೊಳಾಯಿ ಮಾರ್ಗ ಅಳವಡಿಸುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

PDF Created with deskPDF PDF Writer - Trial :: http://www.docudesk.com

30(38) ವಾರ್ಡ್ ನಂ.6 ಶ್ರೀ ಶ್ರೀನಿವಾಸನಾಯ್ಡು ಮನೆ ಹಿಂಭಾಗ. ಕೆ.ಯು.ಡಬ್ಲ್ಯು ಎಸ್ ಪಕ್ಕದ ರಸ್ತೆಯಲ್ಲಿ ಒಳಚರಂಡಿ ಸಂರ್ಪಕ ಕಲ್ಪಿಸುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(39) ವಾರ್ಡ್ ನಂ. 2 ರ ಚಿಕ್ಕ ಕುರುಬರ ಹಳ್ಳಿಯಲ್ಲಿ 6ರಸ್ತೆ ಹಳ್ಳಿಗೆ ಕೊಳಯಿ ಮಾರ್ಗ ಅಳವಡಿಸುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(40) ವಾರ್ಡ್ ನಂ. 18 ಟಿಪ್ಪು ನಗರ ಆಟೋ ಹೈದರ್ ಮನೆ ಹತ್ತಿರ ಹೊಸದಾಗಿ ಒಳಚರಂಡಿ ಲೈನ್ ಎಳೆಯುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(41) ವಾರ್ಡ್ ನ್ಂ.15ರ ಕೊಲ್ಲಾಪುರದಮ್ಮನ ದೇವಸ್ಥಾದ ಅಡ್ಡರಸ್ತೆಗೆ ಕೊಳಯಿ ಮಾರ್ಗ ಅಳವಡಿಸುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(42) 22 ನೇ ವಾರ್ಡ್ ಉಷಾ ಲಾಡ್ಜ್ ರಸ್ತೆ ಮತ್ತು ಮಲ್ಲಂದೂರು ರಸ್ತೆ ಮತ್ತು ಅಲ್‌ಮದೀನ ಮೆಡಿಕಲ್ಸ್ ಹತ್ತಿರ ಹೊಸದಾಗಿ ಮ್ಯಾನ್ ಹೋಲ್ ನಿರ್ಮಾಣ ಮಾಡುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(43) ವಾರ್ಡ್ ನಂ.6 ಒಳಚರಂಡಿ ಆಫೀಸ್ ಕನ್‌ಜ಼ರ್‌ವೆನ್ಸಿ ರಸ್ತೆಯಲ್ಲಿ ಹೊಸದಾಗಿ 2 ಪಿ.ವಿ.ಸಿ ಪೈಪ್ ಕೊಳಯಿ ಮಾರ್ಗ ಅಳವಡಿಸುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(44) ವಾರ್ಡ್ ನಂ.5ರ ಮೂರುಮನೆಹಳ್ಳಿ ರಸ್ತೆ ಸತೀಶ್ ಮನೆಯಿಂದ ಕುಮಾರ್ ಮನೆಯವರೆಗೆ ಹೊಸದಾಗಿ ಬಾಕ್ಸ್ ಚರಂಡಿ ನಿರ್ಮಾಣ ಮಾಡುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(45) ವಾರ್ಡ್ ನಂ. 5 ರ ಕುವೆಂಪುನಗರ ಮುಖ್ಯ ರಸ್ತೆ ಉಮಾಮಹೇಶ್ವರಪ್ಪ ನವರ ಮನೆಯವರೆಗೆ ಹೊಸದಾಗಿ ಕಲ್ಲು ಚರಂಡಿ ನಿರ್ಮಾಣ ಮಾಡುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

PDF Created with deskPDF PDF Writer - Trial :: http://www.docudesk.com

30(46) ವಾರ್ಡ್ ನಂ.1 ರ ಹೌಸಿಂಗ್ ಬೋರ್ಡ್ ಪಂಚಮುಖಿ ಗಣಪತಿ ದೇವಸ್ಥಾನದ ರಸ್ತೆಗೆ ಹೊಸದಾಗಿ ಕೊಳಾಯಿ ಮಾರ್ಗ ಎಳೆಯುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(47) ವಾರ್ಡ್ ನಂ. 5 ಕುವೆಂಪು ನಗರದ ಚಾನೆಲ್ ಕೆಳಭಾಗದ ಈಶ್ವರ್ ಮನೆ ಹತ್ತಿರ ಕುಮಾರ್ ಮರಿಯಣ್ಣನ ಮನೆಯವರೆಗೆ ಮ್ಯಾನ್ ಹೋಲ್ ನಿರ್ಮಾಣ ಮಾಡುವ್ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(48)ವಾರ್ಡ್ ನಂ. 12 ರ ಟಿಂಬರ್ ವ್ಯಾಪಾರಿ ಗೌಸ್ ಮನೆಯವರೆಗೆ 2" ನೀರು ಸರಬರಾಜು ವ್ಯವಸ್ಥೆ ಮಾಡುವ ವಿಚಾರ.

ತೀರ್ಮಾನ:–ಸರ್ವಾನುಮತದಿಂದ ಒಪ್ಪಲಾಯಿತು.

30(49) ವಾರ್ಡ್ ನಂ. 19 ರ ಕಮ್ಯೂನಿಸ್ಟ್ ಕಛೇರಿ ರಸ್ತೆಯಲ್ಲಿ ಕೆಳಭಾಗಕ್ಕೆ ಒಂದು ಮ್ಯಾನ್ ಹೋಲ್ ನಿರ್ಮಾಣ ಮಾಡುವ ವಿಚಾರ.

ತೀರ್ಮಾನ:– ಸರ್ವಾನುಮತದಿಂದ ಒಪ್ಪಲಾಯಿತು.

30(50) ವಾರ್ಡ್ ನಂ. 12ರ ಪೆನ್‌ಷನ್ ಮೊಹಲ್ಲಾ 3 ಮತ್ತು 4ನೇ ಮುಖ್ಯ ರಸ್ತೆ ಪೈಪ್ ಲೈನ್ ಅಳವಡಿಸುವ ವಿಚಾರ.

ತೀರ್ಮಾನ:– ಸರ್ವಾನುಮತದಿಂದ ಒಪ್ಪಲಾಯಿತು.

30(51) ಮಾನ್ಯ ಜಿಲ್ಲಾಧಿಕಾರಿಗಳವರ ಪತ್ರದ ಸಂಖ್ಯೆ:ಎಂಯುಎನ್‌ಸಿಆರ್:306:05–06 ದಿ:–25-5-02005 ರಲ್ಲಿ ನಗರಸಭೆ ಚಿಕ್ಕಮಗಳೂರು ಆಯುರ್ವೇದಿಕ್ ಆಸ್ಪತ್ರೆಯಲ್ಲಿ ಗುತ್ತಿಗೆ ಆಧಾರದಲ್ಲಿ ಡಾ।।ಎನ್.ವಿರೂಪಾಕ್ಷಪ್ಪ ಇವರು ವೈದ್ಯರ ಸೇವೆ ಸಲ್ಲಿಸುತ್ತಿದ್ದು ದಿನಾಂಕ:1-4-2005 ರಿಂದ 31-3-2005 ಕ್ಕೆ ಮುಗಿದಿದ್ದು ದಿನಾಂಕ 1-4-2005 ರಿಂದ 31-3-2006 ರವರೆಗೆ ಗುತ್ತಿಗೆ ಅವಧಿಯನ್ನು ಮುಂದುವರಿಸುವ ಬಗ್ಗೆ.

ತೀರ್ಮಾನ:– ಪ್ರಸಕ್ತ ವರ್ಷಕ್ಕೆ (ಈ ವರ್ಷಕ್ಕೆ) ಮುಂದುವರೆಸಿ ಮುಂದಿನ ವರ್ಷಕ್ಕೆ ಪ್ರಸ್ತಾವನೆ ಸಲ್ಲಿಸಲು ಸರ್ವಾನುಮತದಿಂದ ಒಪ್ಪಿ ನಿರ್ಣಯ ಅಂಗಿಕರಿಸಲಾಯಿತು.

ವಿಷಯ 30(52) ವಾರ್ಡ್ ನಂ. 15ರ ಐ.ಜಿ ರಸ್ತೆಯಲ್ಲಿ ಪೆಟ್ರೋಲ್ ಬಂಕ್ ಹತ್ತಿರ ಒಂದು ಮ್ಯಾನ್ ಹೋಲ್ ನಿರ್ಮಾಣ ಮಾಡುವ ವಿಚಾರ.

ತೀರ್ಮಾನ:– ಒಪ್ಪಲಾಯಿತು.

30(53) ವಾರ್ಡ್ ನಂ. 23 ರಲ್ಲಿ ಶ್ರೀ ಲಾಯರ್ ಉತ್ತಯ್ಯನ ಮನೆಮುಂಭಾಗದಲ್ಲಿ (ಚಪ್ಪಡಿ ಚರಂಡಿ) ಬಾಕ್ಸ್ ಚರಂಡಿ ನಿರ್ಮಿಸುವ ವಿಚಾರ.

PDF Created with deskPDF PDF Writer - Trial :: http://www.docudesk.com

ತೀರ್ಮಾನ:– ಸರ್ವಾನುಮತದಿಂದ ಒಪ್ಪಲಾಯಿತು.

30(54) ವಾರ್ಡ್ ನಂ.11 ಬಾರ್‌ಲೈನ್ ರಸ್ತೆ ಹೆನ್ರಿ ಮನೆಯ ಹತ್ತಿರ ಬೋರ್‌ವೆಲ್ ಅಳ್ವಡಿಸಿರುವ ಮೋಟಾರ್ ಪಂಪ್ ಹಾಳಾಗಿದ್ದು ಹೊಸದಾಗಿ ಮೋಟಾರ್ ಪಂಪನ್ನು ಅಳ್ವಡಿಸುವ ವಿಚಾರ.

ತೀರ್ಮಾನ:– ಸರ್ವಾನುಮತದಿಂದ ಒಪ್ಪಲಾಯಿತು.

30(55) ವಾರ್ಡ್ ನಂ.11 ಬರ್‌ಲೈನ್ ರಸ್ತೆ ಎಸ್.ಸಿ.ಎಸ್.ಟಿ ಹಾಸೆಟಲ್ ಮುಂಭಾಗದಲ್ಲಿ ಹೊಸದಾಗಿ ಡೆಕ್ ಸ್ಲ್ಯಾಬ್ ನಿರ್ಮಾಣ ಮಾಡುವ ವಿಚಾರ.

ತೀರ್ಮಾನ:– ಸರ್ವಾನುಮತದಿಂದ ಒಪ್ಪಲಾಯಿತು.

30(56) ವಾರ್ಡ್ ನಂ.28 ಕುಂಬಾರ ಬೀದಿಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿಗೆ ತೊಂದರೆಯಾದ ಕಾರಣ ಹಾಲಿ ಇರುವ ಹಳೇ ಪೈಪನ್ನು ತೆಗೆದು ಹೊಸದಾಗಿ ಪೈಪ್ ಲೈನ್ ಆಳವಡಿಸುವ ವಿಚಾರ.

ತೀರ್ಮಾನ:– ಸರ್ವಾನುಮತದಿಂದ ಒಪ್ಪಲಾಯಿತು.

30(57) ನರಸಿಂಗರಾವ್ ರಸ್ತೆ ಕುಡಿಯುವ ನೀರಿಗೆ ತೊಂದರೆಯಾದ ಕಾರಣ ಹಾಲಿ ಇರುವ ಹಳೆ ಪೈಪ್ ಲೈನ್ ತೆಗೆದು ಹೊಸದಾಗಿ ಪ್ಯಪ್ ಲೈನ್ ಆಳವಡಿಸುವ ವಿಚಾರ.

ತೀರ್ಮಾನ:– ಸರ್ವಾನುಮತದಿಂದ ಒಪ್ಪಲಾಯಿತು.

30(58) ವಾರ್ಡ್ ನಂ. 7 ನೆಲ್ಲೂರ್ ಗೇಟಿನ ಹೊಸ ಬಡಾವಣೆಗೆ 2 ಪಿ.ವಿ.ಸಿ ಪೈಪ್ ಲೈನ್ ಆಳವಡಿಸಿ ನೀರು ಸರಬರಾಜು ವ್ಯವಸ್ಥೆಮಾಡುವ ವಿಚಾರ. ಹಾಗೂ ಆದರ್ಶ ನಗರದ ತಗ್ಗು ಪ್ರದೇಶದ ನಿವಾಸಿಗಳಿಗೆ ಮಿನಿ ನೀರು ಘಟಕ ನಿರ್ಮಿಸುವ ವಿಚಾರ .

ತೀರ್ಮಾನ:– ಸರ್ವಾನುಮತದಿಂದ ಒಪ್ಪಲಾಯಿತು.

30(59) 2003-40ನೇ ಸಾಲಿನ ತಪಾಸಣಾ ವರದಿಗೆ ಅನುಪಾಲನಾ ವರದಿ ಸಲ್ಲಿಸುವ ವಿಚಾರ.

ತೀರ್ಮಾನ:– 2003-04 ನೇ ಸಾಲಿನ ತಪಸಣಾ ವರದಿಗೆ ಆನುಪಾಲನಾ ವರದಿ ತಯಾರಿಸಿರುವುದನ್ನು ಒಪ್ಪಿ ಸಹಾಯಕ ನಿಯಂತ್ರಕರು ಸ್ಥಳೀಯ ಲೇಖಾ ಪರೀಕ್ಷಾ ವರ್ತುಲ ಚಿಕ್ಕಮಗಳೂರು ಇವರಿಗೆ ಸಲ್ಲಿಸಬಹುದೆಂದು ಸರ್ವಾನುಮತದಿಂದ ಒಪ್ಪಲಾಯಿತು.

PDF Created with deskPDF PDF Writer - Trial :: http://www.docudesk.com